

# ಮಳೆಗಾಲ, ಕೆರೆಹಾವು ಮತ್ತು ರೇಡಿಯೊ ವಾರ್ತೆ

■ ಸುನಂದಾ ಕಡಮೆ

ಮೊಳೆಗಾಲ ಅಂದ್ರೆ ನನ್ನ ಉತ್ತರಕನ್ನಡ ಕರಾವಳಿಯೊಳಗೆ ಒಂದೇಸಮಾ ದಾರಿಕಟ್ಟಿ ಸುರಿಯೋ ಮಳೆ, ಅಂದ್ರೆ ಬ್ವಾನವೇ ಹರಿದುಬಿದ್ದಂತೆ ಆರ್ಭಟಿಸ್ತ ಇರ್ತದೆ. ಆ ಮೂರೂ ತಿಂಗ್ಳೂ ಸೂರ್ಯನ ಮೊಖಾ ಯಾರೂ ಕಂಡಿರೂದಿಲ್ಲ. ಮೋಡಾ ಮಳೆ ಮೋಡಾ ಮಳೆ, ನುಗ್ಲು ಕಟ್ಟಿದಂತೆ ಭೂಮಿ ಬ್ವಾನು ಒಂದೇ ಆಗಿರ್ತದೆ. ಮೊಳೆರಾಯನ ಮೇಲೆ ಚೂರು ಸಿಟ್ಟು ತೋರ್ಸಿ ರಸ್ತೇಲಿ ತಮ್ಮ ದಿನದ ದಂದೆಗಾಗಿ ಓಡಾಡೋ ಜನ, ಸುರಿಯೋ ಮಳೇಲಿ ಸುಮ್ನೇ ತೋಯ್ಸಿಕೊಳ್ಳೋ ಹುರ್ಪು. ಸಣ್ಣ ಸಣ್ಣ ಊರು, ಒಂದು ದ್ವೀಪದಂತೆ ಅದ್ರ ಮೂರೂ ಬದಿ ಹಳ್ಳ.

ಶಾಲೇ ರಸ್ತೆಯಿಡೀ ಗಿಜಿಗಿಜಿ ಒದ್ದೆ. ಪಾಟೀಚೀಲದ ಜೊತೆ ಜೊತೆಗೇ ಪುಸ್ತಕ ನೋಟ್ಬುಕ್ಕುಗಳ ಅಂಚೆಲ್ಲ ತೊಯ್ದು ಇಂಕು ಪೆನ್ನಿನ ಅಕ್ಷರಗಳು ಮೂಡ್ಸೋ ವಿಚಿತ್ರ ಚಿತ್ತಾರ. ಕಲ್ಲಿನ ಪಾಗಾರು ದೇಣಪೆಗಳ ತುಂಬ ಹಸಿರುಕ್ಕೋ ಬೆರ್ಗು. ಒಂದೆಡೆ ಮಳೆ ಸುರೀತಿದ್ರೂ ಇನ್ನೊಂದೆಡೆ ಮೈ ಬೆವರೋ ಸೆಖೆ. ಹೊಸಾ ವರ್ಷದ ಹೊಸಾ ಪುಸ್ತಕದ ಮೊದ್ಲೆರಡು ಪಾಠಗಳನ್ನು ಕಲಿಸಿದ ಮಾಸ್ರ್ರು, ನೀಲಿ ಅಕ್ಷರದಲ್ಲಿ ಲೇಖಕ್ ಎಂದು ಬರಕೊಂಡ ಎಂಬತ್ತು ಪೇಜಿನ ಪಟ್ಟೇಲಿ ತೊಗೊಳ್ಳು ಹತ್ತೇ ಮಾರ್ಕಿನ ಕಿರು ಪರೀಕ್ಷೆ. ಆ ದಿನ ಇಂಥದೇ ವೇಳೆ. ನನಗಿನ್ನೂ ನೆನಪುಂಟು.

ಶಾಲೆಗಾಗಿ ನಮ್ಮ ಹಳ್ಳಿಯಿಂದ ನಾಕು ಪರ್ಲಾಂಗ್ ದೂರದ ಪಕ್ಕದ ಹಳ್ಳೀಗೆ ಹೋಗೂ ಘಳಿಗೆ. ಎರಡೂ ಹಳ್ಳಿಗಳ ಮಧ್ಯೆ ಹರ್ಯೋ ಒಂದು ಸಣ್ಣ ಹಳ್ಳ. ಚಳ್ಳೆಹಳ್ಳ ಅಂತ ಅದರ ಹೆಸ್ರು. ಯಾಕೆ ಅದಕ್ಕೆ ಆ ಹೆಸ್ರು

